ಮನೋಹರ ಒಂದು ಕ್ಷಣ ಸುಮ್ಮನೆ ಕುಳಿತರು.

"ಗೋರೆಗಾಂವನ ಒಂದು ಕಂಪನಿಯಲ್ಲಿ ಅವರು ಅವನಿಗೆ ಒಂದು ಕೆಲಸವನ್ನು ಕೊಡಿಸಿದ್ದರು. ಸಂಬಳವೂ ಚೆನ್ನಾಗಿಯೇ ಇತ್ತು. ಬಹಳ ವರುಷ ಅವನು ಅಲ್ಲಿ ಕೆಲಸಮಾಡುತ್ತಿದ್ದ."

"ಹಾಗಿದ್ದರೆ, ಅಂಥ ಒಳ್ಳೆಯ ಕೆಲಸವನ್ನು ಇವನೇಕೆ ಬಿಟ್ಟ?" ಕೇಳಿದೆ.

"ಸಾಥಿ ಸದಾನಂದಜೀಯವರ ಮರಣಾನಂತರ ಅವರ ಮನೆಯಲ್ಲಿ ಸಾಥಿಯಾನಿಗೆ ಇರುವುದು ಕಠಿಣವಾಯಿತು. ಅವನು ಅಲ್ಲಿಂದ ಹೊರಬಂದ. ಕಾಶೀರಾಮ ಅವರ ಪತ್ನಿ ವಸುಂಧರಾ ಅವರು ಸಾಥಿಯಾನ ಊರಿನವರು. ಆಕೆ ತಮ್ಮ ಪತಿಗೆ ಹೇಳಿ ಸಾಥಿಯಾನಿಗೆ ಮೆಟ್ಟಿಲುಗಳ ಕೆಳಗೆ ಮಲಗಲು ಅನುವು ಮಾಡಿಕೊಟ್ಟಿದ್ದಳು. ಅವನು ವಸುಂಧರಾಳನ್ನು ತನ್ನ ಒಡಹುಟ್ಟಿದವಳಂತೆ ತಿಳಿದಿದ್ದ. ಅವರ ಮನೆಯ ಪಾತ್ರೆ ತಿಕ್ಕುವುದು, ಬಟ್ಟೆ ಒಗೆಯುವುದು ಮೊದಲಾದ ಎಲ್ಲ ಕೆಲಸಗಳನ್ನು ಮಾಡುತ್ತಿದ್ದ."

ಸುಷ್ಮಾ ಅಡುಗೆ ಮನೆಯ ಬಾಗಿಲ ಹಿಂದೆ ನಿಂತು ನಮ್ಮ ಮಾತುಗಳನ್ನೆಲ್ಲ ಕೇಳಿಸಿಕೊಳ್ಳುತ್ತಿದ್ದಳು.

"ಆದರೆ ಅಂಕಲ್, ಸಾಥಿಯಾನು ಅಷ್ಟೊಂದು ಒಳ್ಳೆಯ ನೌಕರಿಯನ್ನೇಕೆ ಬಿಟ್ಟ?" ಸುಷ್ಮಾ ಕೇಳಿದಳು.

"ಅದನ್ನೆ ಹೇಳಲು ನಾನು ಪ್ರಯತ್ನಿಸುತ್ತಿದ್ದೇನೆ. ವಸುಂಧರಾಳ ಎರಡೂ ಹೆರಿಗೆಗಳು ಸಿಜೇರಿಯನ್ ಆಗಿವೆ. ಎರಡನೆಯ ಹೆರಿಗೆಯ ಕಾಲಕ್ಕೆ ಅವಳ ಪರಿಸ್ಥಿತಿ ಬಹಳ ಕಠಿಣವಾಗಿತ್ತು. ಕಾಶೀರಾಮ ತನ್ನ ಕಂಪನಿಯಲ್ಲಿ ಹಣಕಾಸಿನ ಅವ್ಯವಹಾರ ಮಾಡಿದ್ದಕ್ಕಾಗಿ ಸಸ್ಪೆಂಡಾಗಿದ್ದರು. ಕೋರ್ಟ್ ಕೇಸ್ ನಡೆದಿತ್ತು. ಹೆರಿಗೆಯ ನಂತರ ಬಿಲ್ಲನ್ನು ಸಂಪೂರ್ಣವಾಗಿ ಸಂದಾಯ ಮಾಡದ ಹೊರತು ವಸುಂಧರಾಳನ್ನು ಡಿಸ್‌ಚಾರ್ಜ್ ಮಾಡುವುದಿಲ್ಲವೆಂದು ಆಸ್ಪತ್ರೆಯವರು ಬಜಾಯಿಸಿದ್ದರು. ಕಾಶೀರಾಮ ಅವರ ಪರಿಸ್ಥಿತಿ ಗಂಭೀರವಾಗಿತ್ತು. ಹಣ ಅವರ ಬಳಿ ಇರಲಿಲ್ಲ. ಆ ಕಾಲದಲ್ಲಿ ಸಾಥಿಯಾ ಸಹಾಯ ಮಾಡಿರುವುದರ ಬಗ್ಗೆ ಕಲ್ಪನೆಯನ್ನೂ ಮಾಡುವುದು ಸಾಧ್ಯವಿಲ್ಲ. ಅವನು ತನ್ನ ನೌಕರಿ ಬಿಟ್ಟ. ಬಂದ ಪ್ರಾವಿಡೆಂಟ್ ಫಂಡಿನ ಹಣವನ್ನು ಕಂಪನಿಯಿಂದ ತಂದು ಆಸ್ಪತ್ರೆಯ ಬಿಲ್ಲನ್ನು ಚುಕ್ತಾ ಮಾಡಿದ. ಆಮೇಲೆಯಷ್ಟೇ ವಸುಂಧರಾಳ ಬಿಡುಗಡೆ ಆಸ್ಪತ್ರೆಯಿಂದ ಆಯಿತು.

ಸುಷ್ಮಾ ತನ್ನ ಹಸ್ತವನ್ನು ಎದೆಯ ಮೇಲಿಟ್ಟುಕೊಳ್ಳುತ್ತ, "ಅಬ್ಬಾ! ತನ್ನ ಒಡಹುಟ್ಟಿದವರಿಂದಲೂ ಯಾವ ಸೋದರಿಯೂ ಈ ಪರಿಯ ಅಪೇಕ್ಷೆಯನ್ನು ಮಾಡುವುದು ಸಾಧ್ಯವಿಲ್ಲ. ಸಾಥಿಯಾ, ನೀನು ರಿಯಲೀ ಗ್ರೇಟ್ ಆಗಿರುವಿ!" ಎಂದಳು.

"ಹೆರಿಗೆಯ ನಂತರ ವಸುಂಧರಾ ಸದಾ ಅನಾರೋಗ್ಯದಿಂದ ಬಳಲುತ್ತಿದ್ದಳು. ಅವಳ ಕೊನೆಯ ಮಗು ಮೂರು ವರುಷಗಳಾದ ಮೇಲೆ ತೀರಿಹೋಯಿತು. ತಾನು ಬದುಕಿರುವ ವರೆಗೂ ವಸುಂಧರಾ ಅವನಿಗೆ ಎರಡೂ ಹೊತ್ತಿನ ಊಟ ತಪ್ಪದೆ ಕೊಡುತ್ತಿದ್ದಳು. ಮಗು ತೀರಿಕೊಂಡ ಮೇಲೆ ಕಾಶೀರಾಮ ಅವರು ಸಾಥಿಯಾನ ಊಟತಿಂಡಿಯ ವ್ಯವಸ್ಥೆಯನ್ನು ನಿಲ್ಲಿಸಿ ಬಿಟ್ಟರು. ಆದುದರಿಂದ ಸಾಥಿಯಾ ಅನಿವಾರ್ಯವಾಗಿ ಕೊಳೆಗೇರಿಯಲ್ಲಿ ಮದ್ಯದ ಅಂಗಡಿಯೊಂದರಲ್ಲಿ ಕೆಲಸ ಮಾಡಬೇಕಾಯಿತು. ಮಟಕಾದ ಬುಕಿಂಗ್ ಮಾಡಿಕೊಳ್ಳುತ್ತಿದ್ದ. ಪೊಲೀಸರು ಆತನನ್ನು ಹಿಡಿದೊಯ್ದರು. ಆದರೆ ಪೊಲೀಸ ಇನ್‌ಸ್ಪೆಕ್ಟರ್ ಸಾಥಿ ಸದಾನಂದ ಅವರ ಪರಮಭಕ್ತನಾಗಿದ್ದ. ಸಾಥಿಯಾನನ್ನು ಮೊದಲಿನಿಂದಲೂ ಆತ ಗುರುತಿಸುತ್ತಿದ್ದ. ಆದುದರಿಂದ ಅವನು ಕೇವಲ